ಅಸಲು ದಾವೆ ಸಂಖ್ಯೆ- 211/2015
ಪಿಡಬ್ಲ್ಯೂ- 01
ದಿನಾಂಕಃ 10.02.2023
ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ. ಪಿ ಆರ್ ಕೆ ವಕೀಲರಿಂದ

ದಾವಾ ಆಸ್ತಿ ಟಿ ಎಂ ಸಿ ನಂ.227 ಇರುತ್ತದೆ. ಸದರಿ ಆಸ್ತಿಯ ಸಂಪೂರ್ಣ ಅಳತೆ ಹೇಳಲು ಬರುವುದಿಲ್ಲ. ಸದರಿ ಸಂಪೂರ್ಣ ಆಸ್ತಿಯ ಚಕಬಂದಿ ಹೇಳಲು ಬರುವುದಿಲ್ಲ. ಸದರಿ ಆಸ್ತಿ ಮೂಲತಃ ಉಮರಸಾಬ ಬಂಕಾಪೂರ ಇವರದು ಇರುತ್ತದೆ. ಸದರಿ ಆಸ್ತಿಯು ಉಮರಸಾಬ ಇವರು ಖರೀದಿ ಮಾಡಿದ ಆಸ್ತಿ ಇರುತ್ತದೆ. ಸದರಿ ಆಸ್ತಿ ಉಮರಸಾಬ ಇವರ ಆಸ್ತಿ ಅಲ್ಲ ಎಂದರೆ ಸರಿಯಲ್ಲ. ಖರೀದಿ ಪತ್ರವನ್ನು ನ್ಯಾಯಾಲಯಕ್ಕೆ ಹಾಜರು ಮಾಡಿಲ್ಲ ಎಂದರೆ ಸರಿಯಲ್ಲ. ನನ್ನ ವಾದಪತ್ರದಲ್ಲಿ ನಾನು ದಾವಾ ಆಸ್ತಿಯ ಅಳತೆಯನ್ನಾಗಲೀ ಚಕಬಂದಿಯನ್ನಾಗಲೀ ಹೇಳಿ ಬರೆಸಿಲ್ಲ. ಮೂಲತಃ ಸದರಿ ದಾವಾ ಆಸ್ತಿ ನನ್ನ ಅಜ್ಜನದು ಎಂದರೆ ನನಗೆ ಗೊತ್ತಿಲ್ಲ, ನನ್ನ ತಂದೆಯವರು ಖರೀದಿ ಮಾಡಿದ ಆಸ್ತಿ ಇರುತ್ತದೆ. ನನ್ನ ಅಜ್ಜನಿಗೆ ನನ್ನ ತಾಯಿಯನ್ನು ಸೇರಿ 5 ಜನ ಹೆಣ್ಣು ಮಕ್ಕಳು ಎಂದರೆ ನನಗೆ ಗೊತ್ತಿಲ್ಲ. ಸಡದರಿ ದಾವಾ ಆಸ್ತಿಯು 5 ಜನ ಹೆಣು ಮಕ್ಕಳಿಗೆ ಸಂಬಂಧಪಟ್ಟಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆ ಯಾರಿಂದ ಖರೀದಿ ಮಾಡಿರುತ್ತಾರೆ ನನಗೆ ಗೊತ್ತಿಲ್ಲ. ಅವರು ಖರೀದಿ ಮಾಡಿದಾಗ ನಾನು ಇನ್ನೂ ಹುಟ್ಟಿರಲಿಲ್ಲ. ನಾನು 1960 ರಲ್ಲಿ ಹುಟ್ಟಿರುತ್ತೇನೆ. ನನ್ನ ಅಜ್ಜನ ಹೆಸರು ನನಗೆ ಗೊತ್ತಿಲ್ಲ. ನನ್ನ ಅಜ್ಜನ ಹೆಸರು ಮೊದಿನಸಾಬ ಹತ್ತಿವಾಲೆ ಎಂದರೆ ನನಗೆ ಗೊತ್ತಿಲ್ಲ. ನನಗೆ ಗೊತ್ತಿದ್ದರೂ ಸಹ ಇಲ್ಲ ಅಂತಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆ ಈ ದಾವಾ ಆಸ್ತಿ ಕುರಿತು ಒಂದು ದಾವೆ ಹೂಡಿದ್ದ ಎಂದರೆ ಆತ ಸಾವಿರಾರು ಕೇಸು ಹೂಡಿದ್ದ ಯಾವುದು ಅಂತಾ ನನಗೆ ಗೊತ್ತಿಲ್ಲ. ನನ್ನ ತಂದೆ ಉಮರಸಾಬ ದಿನಾಲೂ ನ್ಯಾಯಾಲಯದಲ್ಲಿ ಇರುತ್ತಿದ್ದ ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆ ನಮ್ಮ ತಾಯಿಯನ್ನು ಸೇರಿಸಿ 5 ಜನ ಸಹೋದರಿಯರ ವಿರುದ್ಧ ಅಸಲು ದಾವೆ ನಂ.80/1965 ನ್ನು ಹೂಡಿದ್ದ ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆ ಇದೇ ದಾವಾ ಆಸ್ತಿಗೆ ಸಂಬಂಧಪಟ್ಟಿದ್ದು ಎಂದರೆ ನನಗೆ ಗೊತ್ತಿಲ್ಲ. ನಾನು ಮೋದಿನಸಾಬನನ್ನು ನೋಡಿಲ್ಲ. ಸದರಿ ಅಸಲು ದಾವೆ ನಂ.80/1965 ರ ತೀರ್ಪಿನ ವಿರುದ್ಧ ನನ್ನ ತಂದೆ ಮೇಲ್ಮನವಿ ಸಲ್ಲಿಸಿದ್ದ ಎಂದರೆ ನನಗೆ ಗೊತ್ತಿಲ್ಲ. ಅಲ್ಲಿಯೂ ಸಹ ನಮ್ಮ ವಿರುದ್ಧ ಆದ ನಂತರ ಮಾನ್ಯ ಉಚ್ಛ ನ್ಯಾಯಾಲಯಕ್ಕೆ ಮೇಲ್ಮನವಿ ಸಲ್ಲಿಸಿದ್ದ ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆ ಅಸಲು ದಾವೆ ನಂ.94/1981 ನ್ನು ಘೋಷಣೆ ಮತ್ತು

ಕಬ್ಜೆಗಾಗಿ ದಾಖಲಿಸಿದ್ದ ಎಂದರೆ ನನಗೆ ಗೊತ್ತಿಲ್ಲ. ಅದು ಸಹ ನಮ್ಮ ವಿರುದ್ಧ ಆಗಿರುತ್ತದೆ ಎಂದರೆ ಆ ಆಸ್ತಿಯೇ ಬೇರೆ ಈ ಆಸ್ತಿಯೇ ಬೇರೆ. ಅದರಲ್ಲಿ ಕೂಡಾ ಮಾನ್ಯ ಉಚ್ಚ ನ್ಯಾಯಾಲಯದವರೆಗೆ ಅಪೀಲು ಮಾಡಿದ್ದ ಎಂದರೆ ನನಗೆ ಗೊತ್ತಿಲ್ಲ. ಅದರ ಆರ್ ಎಸ್ ಎ ನಂ.754/1990 ಎಂದರೆ ನನಗೆ ಗೊತ್ತಿಲ್ಲ. ನಾವು ಇಸ್ಮಾಯಿಲ್ ತಬಲ ಇವರ ಕಡೆಯಿಂದ ಅಸಲು ದಾವೆ ನಂ.160/2009 ನ್ನು ಮಾಡಿಸಿದ್ದೆವು ಎಂದರೆ ಸರಿಯಲ್ಲ. ಅದು ಸಹ ಕೆಳ ನ್ಯಾಯಾಲಯದಲ್ಲಿ ಮತ್ತು ಮೇಲ್ಮನವಿ ನ್ಯಾಯಾಲಯದಲ್ಲಿ ನಮ್ಮ ವಿರುದ್ಧ ಆಗಿರುತ್ತದೆ ಎಂದರೆ ಸರಿಯಲ್ಲ. ಉಪ ವಿಭಾಗಾಧಿಕಾರಿಗಳ ಮುಂದೆ ಒಂದು ಕೇಸು ಮಾಡಿದ್ದೆವು ಎಂದರೆ ಸರಿ. ಅದು ಸಹ ವಜಾ ಆಗಿರುತ್ತದೆ ಎಂದರೆ ಸರಿ. ಅದು ವಜಾ ಆದ ನಂತರ ಇದೇ ನ್ಯಾಯಾಲಯದಲ್ಲಿ ಅಸಲು ದಾವೆ ಹೂಡಿದ್ದೆವು ಎಂದರೆ ಸರಿ. ಸದರಿ ದಾವೆ ವಜಾ ಆಗಿರುತ್ತದೆ ಎಂದರೆ ಸರಿ. ಅದರ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದೆವು ಎಂದರೆ ಸರಿ. ಮೇಲ್ಮನವಿ ಸಹ ವಜಾ ಆಗಿರುತ್ತದೆ ಎಂದರೆ ಸರಿ. ನಂತರ ಭೂಶೆಟ್ಟಿ ಅವರ ಕಡೆಯಿಂದ ಅಸಲು ದಾವೆ ನಂ.66/2011 ನ್ನು ಪ್ರತಿವಾದಿಯರ ವಿರುದ್ಧ ಮಾಡಿಸಿದ್ದೆವು ಎಂದರೆ ಸರಿಯಲ್ಲ ಅವರೇ ಮಾಡಿರುತ್ತಾರೆ. ಸದರಿ ದಾವೆ ವಜಾ ಆಗಿರುತ್ತದೆ ಎಂದರೆ ಸರಿ. ಯಾವ ಆಧಾರದ ಮೇಲೆ ನನ್ನ ತಂದೆ ತಮ್ಮ ಹೆಸರು ದಾವಾ ಆಸ್ತಿಗೆ ದಾಖಲಿಸಿಕೊಂಡಿರುತ್ತಾರೆ ಎಂದರೆ ಖರೀದಿ ಪತ್ರದ ಮೇಲೆ ದಾಖಲಿಸಿಕೊಂಡಿರುತ್ತಾರೆ. ನಾನು ನನ್ನ ಅಜ್ಜಿಯನ್ನು ನೋಡಿಲ್ಲ. ನನ್ನ ಅಜ್ಜ ನನ್ನ ಅಜ್ಜಿಗೆ ಮೊಹರ ಬದಲಾಗಿ ಕೊಟ್ಟ ಆಸ್ತಿ ಅಂತಾ ಖರೀದಿ ಪತ್ರ ಮಾಡಿಕೊಂಡಿದ್ದೆವು, ಅದು ನೊಂದಣಿ ಆಗದೇ ಇರುವುದರಿಂದ ಸದರಿ ಖರೀದಿ ಪತ್ರ ರದ್ದಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಾನು ದಾವಾ ಆಸ್ತಿಗೆ ಯಾವುದೇ ರೀತಿ ಸಂಬಂಧ ಇಲ್ಲದೇ ಇದ್ದರೂ ಸಹ ಪ್ರತಿವಾದಿಗೆ ತೊಂದರೆ ಕೊಡುತ್ತಾ ಬಂದಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆ ದಾವಾ ಆಸ್ತಿಗೆ ಮಾಲೀಕ ಇರಲಿಲ್ಲ, ಆದ್ದರಿಂದ ನನಗೆ ದಾವಾ ಆಸ್ತಿಯಲ್ಲಿ ಯಾವುದೇ ಮಾಲ್ಕೀ ಹಕ್ಕು ಇಲ್ಲ ಎಂದರೆ ಸರಿಯಲ್ಲ. ನಾವು ದಾವಾ ಆಸ್ತಿಗೆ ಮಾಲೀಕರು ಅಂತಾ ಘೋಷಣೆ ಮಾಡಲು ದಾವೆ ಮಾಡಿಲ್ಲ ಎಂದರೆ ಸರಿ. ಮೋದಿನಸಾಬ ತನ್ನ 5 ಜನ ಹೆಣ್ಣು ಮಕ್ಕಳನ್ನು 5 ಕಡೆ ಮದುವೆ ಮಾಡಿಕೊಟ್ಟಿರುತ್ತಾನೆ ಎಂದರೆ ಸರಿಯಲ್ಲ. ಅವರಲ್ಲಿ ಹಲೀಮಾಬಿ ಪ್ರತಿವಾದಿ ನಂ.1 ಎ ಇವರು ನನ್ನ ತಾಯಿಯ ಖಾಸ ಸಹೋದರಿ ಎಂದರೆ ಸರಿ. ನನ್ನ ತಾಯಿಗೆ ಉತ್ತರ ಭಾಗದ ಆಸ್ತಿ ಬಂದಿರುತ್ತದೆ ಎಂದರೆ ಅದು ಇವತ್ತಿಗೂ ಹಿಸ್ಸೆ ಆಗಿಲ್ಲ. ಸಾಕ್ಷಿ ಸ್ವತಃ ಅದರಲ್ಲಿ ಹಿಸ್ಸೆ ಆಗಿಲ್ಲ ಅಂತಾ ನುಡಿಯುತ್ತಾರೆ. ಅವರ ಹಿಸ್ಸೆಯ ಜಾಗ ಉತ್ತರ ಭಾಗದ ಜಾಗ ಖುಲ್ಲಾ ಹಾಗೆ ಇರುತ್ತದೆ ಎಂದರೆ ಸರಿಯಲ್ಲ. ದಕ್ಷಿಣ ಭಾಗದಲ್ಲಿ ಪ್ರತಿವಾದಿ ನಂ. 1 ಎ ಹಲೀಮಾಬಿ ಇವರಿಗೆ ಬಂದಿರುತ್ತದೆ ಎಂದರೆ ಸರಿಯಲ್ಲ ಇನ್ನೂ ಹಿಸ್ಸೆ ಆಗಿಲ್ಲ. ಸಾಕ್ಷಿ ಮುಂದುವರೆದು ಆದರೆ ದಕ್ಷಿಣ

ಭಾಗದ ಆಸ್ತಿಯಲ್ಲಿ ಪ್ರತಿವಾದಿಯರು ಇರುತ್ತಾರೆ ಅಂತಾ ನುಡಿಯುತ್ತಾರೆ. ನಮ್ಮ ಕಬ್ಜೆಯಲ್ಲಿ ಎಷ್ಟು ಇರುತ್ತದೆ, ಪ್ರತಿವಾದಿಯರ ಕಬ್ಜೆಯಲ್ಲಿ ಎಷ್ಟು ಇರುತ್ತದೆ ಅಂತಾ ನಿಖರವಾಗಿ ತೋರಿಸಿಲ್ಲ ಎಂದರೆ ಸರಿ. ದಾವಾ ಆಸ್ತಿಯ ಉತಾರದಲ್ಲಿ ಪ್ರತಿವಾದಿ ನಂ.1 ಎ ಇವರ ಗಂಡನ ಹೆಸರು ದಾಖಲಾಗಿರುತ್ತದೆ ಎಂದರೆ ಸರಿ. ಸಾಕ್ಷಿ ಸ್ವತಃ ಜಬರದಸ್ತನಿಂದ ಹಚ್ಚಿಕೊಂಡಿರುತ್ತಾರೆ ಅಂತಾ ನುಡಿಯುತ್ತಾರೆ. ನನ್ನ ತಾಯಿಯ ಹೆಸರು ಜೈತುನಬಿ. ಜೈತುನಬಿ ಹೆಸರಿನ ಬದಲಾಗಿ ನನ್ನ ತಂದೆ ಉಮರಸಾಬನ ಹೆಸರು ದಾವಾ ಆಸ್ತಿಯಲ್ಲಿ ಬಂದಿತ್ತು ಎಂದರೆ ಬಂದಿತ್ತು ಆದರೆ ನನ್ನ ತಾಯಿ ಕಡೆಯಿಂದ ಬಂದಿಲ್ಲ. ನನ್ನ ಅಜ್ಜ ಹೆಣ್ಣು ಮಕ್ಕಳ ಹೆಸರು ಹಚ್ಚುವ ಬದಲಾಗಿ ಅಳಿಯಂದಿರ ಹೆಸರು ಹಚ್ಚಿರುತ್ತಾನೆ ಎಂದರೆ ಸರಿಯಲ್ಲ. ಉಮರಸಾಬ ನನ್ನ ಅಜ್ಜನಿಗೆ ಅಳಿಯ ಎಂದರೆ ಸರಿ. ನನ್ನ ತಂದೆ ನನ್ನ ತಾಯಿ ಮತ್ತು ಅವರ ಸಹೋದರಿಯರಿಗೆ ಮೋಸ ಮಾಡುವ ಸಲುವಾಗಿ ಖೊಟ್ಟಿ ದಾಖಲೆ ಸೃಷ್ಟಿ ಮಾಡಿಕೊಂಡಿರುತ್ತಾನೆ ಎಂದರೆ ಸರಿಯಲ್ಲ. ಮುಸ್ಲಿಂ ಸಂಪ್ರದಾಯದಲ್ಲಿ ಹೆಂಡತಿಯನ್ನು ಬಿಡುವಾಗ ಮೊಹರ್ ಕೊಡಬೇಕು ಎಂದರೆ ಅದರ ಬದಲಾಗಿ ಏನು ಬೇಕಾದರೂ ಕೊಡಬಹುದು. ನನ್ನ ಅಜ್ಜ ನನ್ನ ಅಜ್ಜಿಗೆ ವಿಚ್ಛೆದನ ಕೊಟ್ಟಿಲ್ಲ. ಮೊಹರ್ ಕೊಡಬೇಕಾದರೆ ತಲಾಕ್ ಕೊಡಬೇಕು ಎಂದರೆ ಹಾಗೆ ಇದ್ದರು ಸಹ ಕೊಡುತ್ತಾರೆ. ನನ್ನ ಅಜ್ಜ ಅಜ್ಜಿ ಯಾವಾಗ ತೀರಿಕೊಂಡಿರುತ್ತಾರೆ ನನಗೆ ಗೊತ್ತಿಲ್ಲ. ನಾನು ಹುಟ್ಟುವ ಎಷ್ಟು ವರ್ಷ ಮುಂಚೆ ತೀರಿಕೊಂಡಿರುತ್ತಾರೆ ನನಗೆ ಗೊತ್ತಿಲ್ಲ. ಯಾವಾಗ ತೀರಿಕೊಂಡಿರುತ್ತಾರೆ ನಾನು ವಿಚಾರಿಸಿಲ್ಲ. ನನಗೆ ಎಲ್ಲಾ ಗೊತ್ತಿದ್ದರೂ ಸಹ ನನ್ನ ತಂದೆ ನಾನು ಎಲ್ಲರಿಗೂ ಮೋಸ ಮಾಡುತ್ತಾ ಬಂದಿದ್ದೇವೆ ಎಂದರೆ ಸರಿಯಲ್ಲ. ಪ್ರತಿವಾದಿಯರಿಗೂ ಸಹ ಮೋಸ ಮಾಡಿ ಆಸ್ತಿ ಹೊಡೆಯಬೇಕು ಅಂತಾ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆ ಹೆಸರಿನಲ್ಲಿದ್ದ ಖರೀದಿಪತ್ರ ಹೈಕೋರ್ಟನಲ್ಲಿ ರದ್ದಾಗಿರುವುದು ನನಗೆ ಗೊತ್ತಿಲ್ಲ. ನನ್ನ ತಂದೆ ಯಾವ ಯಾವ ಕೇಸು ಮಾಡಿದ್ದ ಅಂತಾ ಕೇಳಿ ತಿಳಿದುಕೊಂಡಿಲ್ಲ. ನಾವು ಏನೇನು ಪರಿಹಾರ ಕೇಳಿ ಪ್ರಕರಣ ದಾಖಲಿಸಿದ್ದೇ ಅಂತಾ ಹೇಳಲು ಬರುವುದಿಲ್ಲ. ನನಗೆ ಎಲ್ಲಾ ಗೊತ್ತಿದ್ದರೂ ಸಹ ನ್ಯಾಯಾಲಯದ ಮುಂದೆ ನಿಜ ಹೇಳಬಾರದು ಅಂತಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನಾಗಲೀ, ನನ್ನ ತಂದೆಯಾಗಲೀ ದಾವಾ ಆಸ್ತಿಗೆ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ಇದ್ದಾಗಿನಿಂದ ಪ್ರತಿವಾದಿಯರನ್ನು ಕಾಡುತ್ತಾ ಬಂದಿದ್ದೇವೆ ಎಂದರೆ ಸರಿಯಲ್ಲ. ನನಗೆ ಕೋರ್ಟ ಕಚೇರಿ ಅಡ್ಡಾಡುವುದು ಹೊರತುಪಡಿಸಿ ಬೇರೆ ಕೆಲಸ ಇಲ್ಲ ಎಂದರೆ ಹೌದು. ಪ್ರತಿವಾದಿಯರಿಗೆ ತೊಂದರೆ ನೀಡಲು ದಾವೆ ಮಾಡಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂಡಾಧಿಕಾರಿಗಳು.ಸವಣೂರು.